# ಆಟ- ಪಾಠ ಕಾಲದಲ್ಲಿ ಆರೋಗ್ಯ ಸಮಸ್ಯೆ

**ರಾಜ್ಯದ 6.85 ಲಕ್ಷ ಶಾಲಾಮಕ್ಕಳು ವಿವಿಧ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಹುಳುಕುಹಲ್ಲು, ಜಂತುಹುಳುವಿನಂತಹ ಸಾಮಾನ್ಯ ಸಮಸ್ಯೆಗಳಷ್ಟೇ ಅಲ್ಲ. ಹೃದಯ ಸಂಬಂಧಿ ರೋಗಗಳೂ ಈ ಚಿಣ್ಣರನ್ನು ಬಾಧಿಸುತ್ತಿವೆ. ಆಟಪಾಠಗಳಲ್ಲಿ ನಲಿಯಬೇಕಾದ ವಯಸ್ಸಿನಲ್ಲಿ ಕಾಡುತ್ತಿರುವ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಹೇಗೆ?**

ಮಕ್ಕಳು ಶಾಲೆಗೆ ಯಾಕೆ ತಪ್ಪಿಸಿಕೊಳ್ಳುತ್ತವೆ ಎಂದು ಪೋಷಕರನ್ನೋ ಅಥವಾ ಶಿಕ್ಷಕರನ್ನೋ ಕೇಳಿ. ಇದಕ್ಕೆ ಹುಳುಗಳು ಕಾರಣ ಎಂಬಂತಹ ಉತ್ತರ ನಿರೀಕ್ಷಿಸುವುದು ಸಾಧ್ಯವಿಲ್ಲ. ಆದರೆ ವಿಶ್ವ ಆರೋಗ್ಯ ಸಂಸ್ಥೆಯ ಅಂದಾಜಿನ ಪ್ರಕಾರ, ವಿಶ್ವದಲ್ಲಿ 40 ಕೋಟಿ ಶಾಲಾ ಮಕ್ಕಳು ಹೊಟ್ಟೆಯಲ್ಲಿ ಹುಳುಗಳ ಸಮಸ್ಯೆ ಎದುರಿಸುತ್ತಿದ್ದಾರೆ. ಹುಳುಗಳ ಬಾಧೆಯಿಂದಾಗಿ ಭೇದಿ, ರಕ್ತಹೀನತೆಗಳಿಂದಲೂ ಬಳಲುತ್ತಾರೆ. ಇದು ಭಾರತದ ಶಾಲೆಗಳಲ್ಲಿ ಮಕ್ಕಳ ಹಾಜರಾತಿಗೆ ಸದ್ದಿಲ್ಲದ ತಡೆಗೋಡೆಯಾಗಿ ಪರಿಣಮಿಸಿದೆ. ಮಕ್ಕಳು ಶಾಲೆಗಳಿಗೆ ಗೈರುಹಾಜರಾಗುತ್ತಾರೆ. ಓದಿನಲ್ಲಿ ಹಿಂದುಳಿಯುತ್ತಾರೆ. ಕಡೆಗೆ ಶಾಲೆಯನ್ನೇ ತೊರೆಯುತ್ತಾರೆ.

ಪರಿಹರಿಸಬಹುದಾದಂತಹ ಸಣ್ಣಪುಟ್ಟ ಆರೋಗ್ಯ ಸಮಸ್ಯೆಯಿಂದಾಗುವ ದುಷ್ಪರಿಣಾಮ ಇದು. ಇತ್ತೀಚಿನ ರಾಜ್ಯ ಆರೋಗ್ಯ ವರದಿಯ ಪ್ರಕಾರವೂ ರಾಜ್ಯದಲ್ಲಿ 1.28 ಲಕ್ಷ ಶಾಲಾ ಮಕ್ಕಳು ಜಂತು ಹುಳು ಸಮಸ್ಯೆಯಿಂದ ಬಳಲುತ್ತಿದ್ದಾರೆ. ಆದರೆ ಇದಕ್ಕಿಂತಲೂ ಅತಿ ದೊಡ್ಡ ಆರೋಗ್ಯ ಸಮಸ್ಯೆ ಹುಳುಕುಹಲ್ಲುಗಳದ್ದು. 2 ಲಕ್ಷಕ್ಕೂ ಹೆಚ್ಚಿನ ಶಾಲಾಮಕ್ಕಳಿಗೆ ಹುಳುಕು ಹಲ್ಲುಗಳ ಸಮಸ್ಯೆ ಇದೆ. ಅದರಲ್ಲೂ ಬೆಳಗಾವಿ ಜಿಲ್ಲೆಯಲ್ಲಿ ಅತಿ ಹೆಚ್ಚು ಎಂದರೆ 61,830 ಮಕ್ಕಳನ್ನು ಹುಳುಕುಹಲ್ಲು ಸಮಸ್ಯೆ ಕಾಡುತ್ತಿದೆ ಎಂಬಂತಹ ಅಂಕಿಅಂಶಗಳು ಈಗ ಬಹಿರಂಗಗೊಂಡಿವೆ.

ಈ ಮಾಹಿತಿಗಳು ಲಭ್ಯವಾಗಿರುವುದು ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಡಿ ನಡೆಸಲಾದ ಆರೋಗ್ಯ ತಪಾಸಣೆಯಿಂದ. 2006-07ರಲ್ಲಿ ರಾಜ್ಯದಲ್ಲಿ ಆರಂಭವಾದ ಈ ಕಾರ್ಯಕ್ರಮದಡಿ 1ರಿಂದ 10ನೇ ತರಗತಿವರೆಗೆ ಪ್ರತಿ ಶಾಲಾ ವಿದ್ಯಾರ್ಥಿಯ ಆರೋಗ್ಯ ಸ್ಥಿತಿಗತಿಯನ್ನು 10 ವರ್ಷ ದಾಖಲಿಸಲು 'ಹೆಲ್ತ್ ಕಾರ್ಡ್' ನೀಡಲಾಗುತ್ತದೆ. ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಕೆಲವು ಅನುದಾನರಹಿತ ಶಾಲೆಗಳ ಮಕ್ಕಳನ್ನು ಆರೋಗ್ಯ ತಪಾಸಣೆಗೆ ಒಳಪಡಿಸಲಾಗುತ್ತದೆ. ಗಂಭೀರ ಕಾಯಿಲೆ ಪ್ರಕರಣಗಳಿಗೆ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಚಿಕಿತ್ಸೆ ನೀಡಲಾಗುವುದು. ಖರ್ಚು ವೆಚ್ಚವನ್ನು ಆರೋಗ್ಯಇಲಾಖೆಯೇ ಭರಿಸುತ್ತದೆ.

ಈಗ ಈ ಆರೋಗ್ಯ ತಪಾಸಣೆ ಕಾರ್ಯಕ್ರಮದಿಂದ ಬಹಿರಂಗವಾಗಿರುವ ಮತ್ತೊಂದು ಅಂಶವೆಂದರೆ ಹೃದಯದ ಸಮಸ್ಯೆ ಬರೀ ದೊಡ್ಡವರದಲ್ಲ. ರಾಜ್ಯದ 5348 ಶಾಲಾ ಮಕ್ಕಳಿಗೆ ಹೃದಯದ ತೊಂದರೆ ಇದೆ. 2000ಕ್ಕೂ ಅಧಿಕ ಮಕ್ಕಳಲ್ಲಿ ಇದು ಹುಟ್ಟುತ್ತಲೇ ಬಂದಿರುವ ವೈಕಲ್ಯವಾಗಿದೆ. ಸುವರ್ಣ ಆರೋಗ್ಯ ಚೈತನ್ಯ ಯೋಜನೆ ಅಡಿ ಈ ಮಕ್ಕಳಿಗೆ ಚಿಕಿತ್ಸೆ ತಲುಪುವಂತಾಗಲು ತಂದೆ-ತಾಯಿ, ಶಿಕ್ಷಕರು, ಶಿಕ್ಷಣ, ಆರೋಗ್ಯ ಇಲಾಖೆಗಳು ಹಾಗೂ ಜಿಲ್ಲಾ ಆಡಳಿತದ ಸಾಮೂಹಿಕ ಪ್ರಯತ್ನ ಅಗತ್ಯ. ಹೃದಯ ಕಾಯಿಲೆಗೆ ಆರಂಭದಲ್ಲೇ ಚಿಕಿತ್ಸೆಯಾದಲ್ಲಿ ಮುಂದೆ ಮಕ್ಕಳು ಸಹಜ ಜೀವನ ನಡೆಸುವುದು ಸಾಧ್ಯವಾಗುತ್ತದೆ.

ರಾಜ್ಯದ ಶಾಲಾ ಮಕ್ಕಳಲ್ಲಿ ಇರುವ ಮತ್ತೊಂದು ಪ್ರಮುಖ ಆರೋಗ್ಯ ಸಮಸ್ಯೆ ರಕ್ತಹೀನತೆ. 92684 ಮಕ್ಕಳಲ್ಲಿ ಈ ಸಮಸ್ಯೆ ಇದ್ದು ಮತ್ತೆ ಇದರಲ್ಲೂ ಬೆಳಗಾವಿ ಜಿಲ್ಲೆಯೇ ಪ್ರಥಮ ಸ್ಥಾನದಲ್ಲಿದೆ. (18526). ಜತೆಗೇ ಕಿವಿ ಸೋರುವಿಕೆ, ದೃಷ್ಟಿದೋಷ, ಕಿವುಡು, ಗಳಗಂಡ, ಕುಷ್ಟ, ಕ್ಷಯ ಇತ್ಯಾದಿ ತೊಂದರೆಗಳಿಂದಲೂ ಶಾಲಾ ಮಕ್ಕಳು ಬಳಲುತ್ತಿವೆ. ಒಟ್ಟಾರೆಯಾಗಿ ತಪಾಸಣೆಗೊಳಪಟ್ಟ 62,95,371 ಶಾಲಾ ಮಕ್ಕಳಲ್ಲಿ 6.85 ಲಕ್ಷ ಮಂದಿ ಎಂದರೆ ಶೇ. 10ರಷ್ಟು ಮಕ್ಕಳಿಗೆ ಒಂದಲ್ಲಾ ಒಂದು ಆರೋಗ್ಯ ಸಮಸ್ಯೆ ಇದೆ.

ಆರೋಗ್ಯ ಕುರಿತಾದ ಈ ಅಂಕಿ ಅಂಶಗಳು ನಮ್ಮ ಕಣ್ಣು ತೆರೆಸುವಂತಿವೆ. ಈಗಿರುವ ಶಾಲಾ ವ್ಯವಸ್ಥೆಯಲ್ಲಿ ಭಾರಿ ಪ್ರಮಾಣದ ಆರೋಗ್ಯ ಕಾರ್ಯಕ್ರಮಗಳನ್ನು ಆರಂಭಿಸಲು ಪ್ರೇರಣೆಗೆ ಈ ಅಂಕಿ ಅಂಶಗಳೇ ಸಾಕು, ಈ ಬಾರಿಯ ಸಮೀಕ್ಷೆಯ ವಿಶೇಷ ಎಂದರೆ ವಿಟಮಿನ್ ಎ ಕೊರತೆ ಇರುವ ಮಕ್ಕಳ ಸಂಖ್ಯೆ 17,306ಕ್ಕೆ ಇಳಿದಿದೆ. ಈ ಇಳಿಕೆಗೆ ಬಿಸಿಯೂಟದ ಕಾರ್ಯಕ್ರಮ ಕಾರಣ ಇರಬಹುದೆಂದು ವಿಶ್ಲೇಷಿಸಲಾಗಿದೆ. ಹೀಗಾಗಿಯೇ ಆರೋಗ್ಯ ವೃದ್ಧಿಗೆ ಶಾಲೆಗಳು ಪ್ರಮುಖ ನೆಲೆಗಳಾಗಬಹುದೆಂಬ ಭರವಸೆ ಮೂಡುತ್ತದೆ.

ವ್ಯಕ್ತಿಯ ಬದುಕಲ್ಲಿ ಬಾಲ್ಯ ಹಾಗೂ ಹದಿವಯಸ್ಸಿನ ಘಟ್ಟ ಮುಖ್ಯವಾದುದು. ಸೃಜನಾತ್ಮಕ ಸಾಮರ್ಥ್ಯಗಳ ಅನ್ವೇಷಣೆಯ ಕುತೂಹಲಗಳ ಕಾಲ ಇದು. ಈ ಕಾಲಘಟ್ಟಗಳು ಒಂಟಿತನ, ಪ್ರತ್ಯೇಕತೆ, ಗೊಂದಲಗಳ ಭಾವನೆಗಳ ಗೂಡೂ ಆಗಬಹುದು. ಮಕ್ಕಳಲ್ಲಿ ಹುದುಗಿರುವ ಸಾಮರ್ಥ್ಯಗಳ ಹೆಚ್ಚಳಕ್ಕೆ ಶಾಲೆಗಳ ಜತೆಜತೆಗೇ ಕುಟುಂಬಗಳು ಹಾಗೂ ಸಮುದಾಯಗಳೂ ನೆರವೀಯಬೇಕು. ಈ ಬಗ್ಗೆ ಶಾಲಾಮಟ್ಟದಲ್ಲೇ ಜಾಗೃತಿಯಾದರೆ ಒಟ್ಟಾರೆ ರಾಷ್ಟ್ರದ ಆರೋಗ್ಯ ಚಿತ್ರಣವೇ ಬದಲಾಗುತ್ತದೆ. ಶಿಕ್ಷಣ ಹಾಗೂ ಆರೋಗ್ಯ ಒಂದೇ ನಾಣ್ಯದ ಎರಡು ಮುಖಗಳು. ವ್ಯಕ್ತಿಯ ಒಟ್ಟಾರೆ ವ್ಯಕ್ತಿತ್ವ ವಿಕಸನಕ್ಕೆ ಈ ಎರಡೂ ಅತ್ಯವಶ್ಯ ಎಂಬುದನ್ನು ಮರೆಯದಿರೋಣ.

■ ಸಿ.ಜಿ. ಮಂಜುಳಾ

